OS : 41/2016
P.W-1

<u>ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕೂಡ್ಲಿಗಿ</u>

ದಿನಾಂಕಃ 02.11.2023 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ 1 ರಿಂದ 4 ಪರ ಹೆಚ್ ಜಿ ಆರ್ ವಕೀಲರಿಂದಃ**

ನಾನು 10 ನೇ ತರಗತಿ ಓದಿದ್ದೇನೆ. ನನಗೆ 48 ವರ್ಷ ವಯಸ್ಸು ಎಂದರೆ ಸರಿ. ದಾವಾ ಆಸ್ತಿ ಕಂದಾಯ ದಾಖಲೆಗಳ ಮಾಹಿತಿ ಇದೆ. ದಾವಾ ಆಸ್ತಿಯ ಕಂದಾಯಗಳು 1968 ರಿಂದ ಇಲ್ಲಿವರೆಗೆ ಪ್ರತಿವಾದಿಗಳ ತಾತ, ಪ್ರತಿವಾದಿಗಳ ತಂದೆ ನಂತರ ಪ್ರತಿವಾದಿಗಳ ಹೆಸರಿನಲ್ಲಿ ಇವೆ ಎಂದರೆ ಸರಿಯಲ್ಲ. ಸದರಿ ದಾಖಲೆಗಳು ಪ್ರತಿವಾದಿಗಳ ಹೆಸರಿನಲ್ಲಿದ್ದು ಅವರೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಪ್ರತಿವಾದಿಗಳ 1 ಮತ್ತು 2 ರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂದಿಸಿದಂತೆ 1991 ರಲ್ಲಿ ಉಪವಿಭಾಗ ಆಗಿದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪತ್ರದ 3 ನೇ ಪ್ಯಾರಾ ದಲ್ಲಿ ವಿಭಾಗ ಆದ ಬಗ್ಗೆ ಹೇಳಿದ್ದೇನೆ ಎಂದರೆ ಸರಿಯಲ್ಲ. ಸ.ನಂ.343 ಎ/1, 3.70 ಎಕ್ರೆ ಮತ್ತು ಸ.ನಂ.343 ಎ/2, 8.90 ಎಕ್ರೆ ಮತ್ತು ಸ.ನಂ.343 ಎ/2-5, 8.09 ಎಕ್ರೆ ಸಂಬಂದ ವಿಭಾಗ ಆಗಿದೆ ಎಂದರೆ ಸರಿಯಲ್ಲ. ಸ.ನಂ.343 ಎ/2, 8.90 ಎಕ್ರೆ ಆಸ್ತಿ ಪ್ರತಿವಾದಿ 1,2 ರ ತಾತ ಭೀಮಪ್ಪ ಹೆಸರಿನಲ್ಲಿ ಖಾತೆ ಮತ್ತು ಸ್ವಾಧೀನ ಇತ್ತು ಎಂದರೆ ಸರಿಯಲ್ಲ. ಅವರ ನಂತರ ಅವರ ಮಗ ತಲಾರಿ ತಿಮಪ್ಪರ ಹೆಸರಿನಲ್ಲಿ ಖಾತೆ ಮತ್ತು ಸ್ವಾಧೀನಕ್ಕೆ ಬಂದಿದೆ ಎಂದರೆ ಸರಿಯಲ್ಲ. ಪ್ರತಿವಾದಿ 1,2 ರವರ ಹೆಸರಿನಲ್ಲಿ ಖಾತೆ ಮತ್ತು ಸ್ವಾಧೀನಕ್ಕೆ ಬಂದಿದೆ ಎಂದರೆ ಸರಿಯಲ್ಲ. ಹಾಗಾಗಿ ಸದರಿ ಆಸ್ತಿಗೆ ಪ್ರತಿವಾದಿಗಳೆ ಮಾಲೀಕರು ಎಂದರೆ ಸರಿಯಲ್ಲ. 1959 ನಲ್ಲಿ ಪ್ರತಿವಾದಿ 1,2 ರವರ ತಾತ ಭೀಮಪ್ಪ ಮತ್ತು ಪ್ರತಿವಾದಿ 3 ರಿಂದ 5 ರವರ ತಾತ ಕುಂಟುಬೋರಪ್ಪ ರಿಗೆ ಸ.ನಂ.343 ಎ/1, 3.70 ಎಕ್ರೆ ಮತ್ತು ಸ.ನಂ.343 ಎ/2, 2.36 ಎಕ್ರೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಅಂದಿನಿಂದ ಸದರಿ ಆಸ್ತಿ ಕುಂಟುಬೋರಪ್ಪರವರ ಸ್ವಾಧೀನಲ್ಲಿತ್ತು ಮತ್ತು ಖಾತೆ ಸಹ ಸದರಿಯವರ ಹೆಸರಿನಲ್ಲಿತು ಎಂದರೆ ಸರಿಯಲ್ಲ. ನಂತರ ಅವರ ಮಗ ಕಂಪನಿ ಓಬಯ್ಯ ಹೆಸರಿಗೆ ಬಂದಿದೆ ಎಂದರೆ ಸರಿಯಲ್ಲ. ಈಗಲೂ ಸಹ ಸದರಿ ಆಸ್ತಿಗಳು ಪ್ರತಿವಾದಿ 3 ರಿಂದ 5 ರ ಸ್ವಾಧೀನಲ್ಲಿವೆ ಎಂದರೆ ಸರಿಯಲ್ಲ. ಆದ್ದರಿಂದ ಸದರಿ ಪ್ರತಿವಾದಿಗಳೆ ಸದರಿ ಆಸ್ತಿಯ ಮಾಲೀಕರು ಎಂದರೆ ಸರಿಯಲ್ಲ. ಸ.ನಂ.343 ಎ/2-5, 8.09 ಎಕ್ರೆ ಸದರಿ ಆಸ್ತಿಯ ಮೇಲೆ ತುಂಬಭದ್ರ

ಗ್ರಾಮೀಣ ಬ್ಯಾಂಕಿನಲ್ಲಿ ಸಾಲ ಮಾಡಿ ಆಧಾರ ಪಡೆದಿದ್ದಾರೆ ಎಂದರೆ ಸರಿಯಲ್ಲ. 2008 ಮತ್ತು 2011 ರಲ್ಲೂ ಸಹ ಸಾಲ ಪಡೆದಿದ್ದಾರೆ ಎಂದರೆ ಸರಿಯಲ್ಲ. 1968 ರಿಂದ ಇಲ್ಲಿವರೆಗೆ ಪ್ರತಿವಾದಿಗಳೆ ಸ್ವಾಧೀನದಲ್ಲಿದ್ದರಿಂದ ನಾನು ಸಲ್ಲಿಸಿದ ಅರ್ಜಿ ಊರ್ಜಿತವಲ್ಲ ಎಂದರೆ ಸರಿಯಲ್ಲ. ನಿಪಿ 2 ರಲ್ಲಿ ಪ್ರತಿವಾದಿ 1,2 ರ ತಾತನ ತಂದೆ ಪೂಜಾರಿ ಲಿಂಗಪ್ಪ ಅಲಿಯಾಸ್ ಲಿಂಗ ಹೆಸರಿನಲ್ಲಿ ಖಾತೆ ಇದೆ ಎಂದರೆ ಸರಿಯಲ್ಲ. ನಿಪಿ 4 ರಲ್ಲಿ ಇರುವ ದಾನಪ್ಪ ನನ್ನ ತಂದೆ. ಸದರಿ ದಾನಪ್ಪ ತಾತನ ಹೆಸರು ದಾನಪ್ಪ. ನನ್ನ ತಂದೆ ತಾತ ದಾನಪ್ಪನ ಹೆಸರ ಮರಣ ಪತ್ರ ಕೊಡಿ ಎಂದು ನಿಪಿ 5 ರ ದಾಖಲೆ ಕೊಟ್ಟಿದೇವೆ ಎಂದರೆ ಸರಿ. ನಿಪಿ 5 ರಿಂದ 8 ರ ದಾಖಲೆಗಳನ್ನು ನನ್ನ ತಂದೆ ಹೇಳಿಕೆ ಮೇಲೆ ನೀಡಿಲಾಗಿದೆ ಎಂದರೆ ಸರಿ. ಈ ದಾವೆಗಾಗಿ ನಿಪಿ 5 ರಿಂದ 8 ರ ದಾಖಲೆಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಿಪಿ 3,4 ರ ವಂಶವೃಕ್ಷದ ದಾಖಲೆಗಳನ್ನು ನನ್ನ ತಂದೆ ಹೇಳಿಕೆ ಮೇಲೆ ನೀಡಿಲಾಗಿದೆ ಎಂದರೆ ಸರಿ. ಪ್ರಕರಣಕ್ಕೆ ಅನುಕೂಲವಾಗಲೆಂದು  ಪೂಜಾರಿ ಲಿಂಗಪ್ಪ ಅಲಿಯಾಸ್ ಲಿಂಗ ನನ್ನ ತಾತ ಎಂದು ಹೇಳಿ ಸುಳ್ಳು ವಂಶವೃಕ್ಷವನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೂ ನಮಗೂ ಸಂಬಂದ ಇಲ್ಲ ಎಂದರೆ ಸರಿಯಲ್ಲ.  ಪೂಜಾರಿ ಲಿಂಗಪ್ಪ ಅಲಿಯಾಸ್ ಲಿಂಗ ಪ್ರತಿವಾದಿ 1,2 ರ ಮುತ್ತಜ್ಜ ಲಿಂಗ ಎಂದರೆ ಸರಿಯಲ್ಲ. ನಿಪಿ 10 ರಂತೆ ಪ್ರತಿವಾದಿ 1,2 ರ ಮುತ್ತಜ್ಜ ಅಂದರೆ ಭೀಮಪ್ಪನ ತಂದೆ 1936 ರಲ್ಲಿ ಆಧಾರ ಮಾಡಿದ್ದಾರೆ ಎಂದರೆ ಸರಿಯಲ್ಲ. ಸ.ನಂ.343 ಎ/2-5, 8.09 ಎಕ್ರೆ ಆಸ್ತಿಯಲ್ಲಿ ಪ್ರತಿವಾದಿ 1,2 ರ ತಂದೆ 1996 ರಲ್ಲಿ ಕೊಳವೆ ಬಾವಿ ತೆಗೆಸಿ ವಿದ್ಯುತ ತೊಗೊಂಡಿದ್ದಾರೆ ಎಂದರೆ ಸರಿಯಲ್ಲ. 1996 ರಿಂದ ನೀರಾವರಿ ವ್ಯವಸಾಯ ಮಾಡುತಿದ್ದಾರೆ ಎಂದರೆ ಸರಿಯಲ್ಲ. ಅದರಲ್ಲಿ 3 ತೆಂಗಿನ ಮರ, 1 ಮಾವಿನ ಮರ, 2 ಹುಂಚೆ ಮರ, 1 ಬನ್ನಿ ಮರ ಇವೆ ಎಂದರೆ ಸರಿ. ಸದರಿ ಬೋರ್ವೆಲ ತೆಗೆದ ನಂತರ ಸದರಿ ಮರಗಳನ್ನು ಬೆಳಸಿದ್ದಾರೆ ಎಂದರೆ ಸರಿ. ನನ್ನ ತಂದೆ ಆರೋಗ್ಯವಾಗಿದ್ದಾರೆ ಎಂದರೆ ಸರಿಯಲ್ಲ. ಅವರು ನ್ಯಾಯಾಲಯಕ್ಕೆ ಬಂದರೆ ಸತ್ಯಾಂಶ ತಿಳಿಯುತ್ತದೆ ಎಂದು ನನ್ನ ಮೂಲಕ ಸಾಕ್ಷ್ಯ ಹೇಳಿಸುತಿದ್ದಾರೆ ಎಂದರೆ ಸರಿಯಲ್ಲ. 1968 ರಿಂದ ಇಲ್ಲಿವರೆಗೂ ನನ್ನ ತಂದೆ ಹೆಸರಿನಲ್ಲಿ ಯಾವುದೇ ಮ್ಯುಟೇಷನ ಆಗಿಲ್ಲ ಎಂದರೆ ಸರಿ. 1968 ರಿಂದ 2014 ವರೆಗೂ ನಾವು ಸ್ವಾದೀನದಲ್ಲಿದೇವೆ ಎಂದು ಹೇಳಲು ಯಾವುದೇ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. 2014 ರಲ್ಲಿ ದಾವಾ ಆಸ್ತಿಯಿಂದ ನಮ್ಮನ್ನು ಹೊರಹಾಕಿದ್ದಾರೆ ಎಂದು ಹೇಳಲು

OS : 41/2016
P.W-1

ಪ್ರತಿವಾದಿ ವಿರುದ್ಧ ಪೋಲಿಸ್ ಠಾಣೆಯಲ್ಲಿ ಯಾವುದೇ ದೂರು ಕೊಟ್ಟಿಲ್ಲ. 2014 ರಲ್ಲಿ ದಾವಾ ಆಸ್ತಿಯಿಂದ ನಮ್ಮನ್ನು ಹೊರಹಾಕಿದ್ದಾರೆ ಎಂದು ಸುಳ್ಳು ಹೇಳಿಕೊಂಡು ಸುಳ್ಳು ದಾವೆ ಹಾಕಿದ್ದೇವೆ ಎಂದರೆ ಸರಿಯಲ್ಲ. ನಾನು ಸಂಡೂರಿನ ಕಾರ್ತಿಕೇಶ್ವರ ಗ್ರಾಮದಲ್ಲಿ ವಾಸವಿದ್ದೇನೆ. ಈಗ್ಗೆ ಸುಮಾರು 60 ವರ್ಷದಿಂದ ಅಲ್ಲಿ ವಾಸವಿದ್ದೇವೆ ಎಂದರೆ ಸರಿ. ಸದರಿ ಗ್ರಾಮದಿಂದ ಸುಮಾರು 40 ಕಿ.ಮಿ ದೂರ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

ಓ,ಹೇ,ಕೇ,ಸರಿ ಇದೆ,

ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ
ಕೂಡ್ಲಿಗಿ.